# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ | : | 261 |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಪ್ರಸಕ್ತ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆಯಾಗಿ ಅತಿವೃಷ್ಟಿಯಿಂದ ಎಷ್ಟು ಹೆಕ್ಟೇರ್ ಪ್ರದೇಶ ಹಾನಿಯಾಗಿದೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ 2022-23ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಉಂಟಾದ ಬೆಳೆಹಾನಿಯ ಕುರಿತು ಜಂಟಿ ಸಮೀಕ್ಷೆ ಕಾರ್ಯ ಚಾಲ್ತಿಯಲ್ಲಿದ್ದು, ಈ ತಹಲ್‌ವರೆಗೂ ಉಂಟಾಗಿರುವ ಬೆಳೆ ನಷ್ಟದ ವಿವರ ಈ ಕೆಳಕಂಡಂತೆ ತಾಲ್ಲೂಕುವಾರು ನಮೂದಿಸಿದೆ. |

**ಬೆಳೆ ಹಾನಿಯ ವಿವರ (ಹೆಕ್ಟೇರ್)**

| ಕ್ರ. ಸಂ. | ತಾಲ್ಲೂಕು | ಕೃಷಿ ಬೆಳೆ | ತೋಟಗಾರಿಕೆ ಬೆಳೆ | ಒಟ್ಟು |
|---|---|---|---|---|
| 1 | ಕೊರಟಗೆರೆ | 607 | 31.95 | 638.95 |
| 2 | ತುಮಕೂರು | 12.18 | 18.20 | 30.38 |
| 3 | ಚಿಕ್ಕನಾಯಕನಹಳ್ಳಿ | 0 | 30.21 | 30.21 |
| 4 | ಕುಣಿಗಲ್ | 25 | 7.33 | 32.33 |
| 5 | ಮಧುಗಿರಿ | 1052 | 42.65 | 1094.65 |
| 6 | ಪಾವಗಡ | 615.66 | 507.66 | 1123.32 |
| 7 | ಶಿರಾ | 475 | 69.45 | 544.45 |
| 8 | ಗುಬ್ಬಿ | 0 | 78.71 | 78.71 |
| 9 | ತಿಪಟೂರು | 2.49 | 14.44 | 16.93 |
| 10 | ತುರುವೇಕೆರೆ | 0.4 | 6.02 | 6.06 |
| **ಒಟ್ಟು** | | **2789.73** | **806.62** | **3595.99** |

| ಪ್ರಶ್ನೆ | ಉತ್ತರ |
|---|---|
| (ಆ) ಸರ್ಕಾರದಿಂದ ಬಿಡುಗಡೆ ಮಾಡಿದ ಪರಿಹಾರದ ಮೊತ್ತ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಅತಿ ವೃಷ್ಟಿ/ ಪ್ರವಾಹದಿಂದಾಗುವ ಬೆಳೆಹಾನಿಗೆ ಇನ್ ಪುಟ್ ಸಬ್ಸಿಡಿಯನ್ನು ಪ್ರತಿ ರೈತರಿಗೆ ಗರಿಷ್ಟ 2 ಹೆಕ್ಟೇರ್ ಗೆ ಸೀಮಿತಗೊಳಿಸಿ ಈ ಕೆಳಕಂಡಂತೆ ಪರಿಷ್ಕೃತ ದರದಲ್ಲಿ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ. (ಸ.ಆ.ಸಂ.ಕಂ.ಇ 276 TNR 2022 ,ದಿ:14.07.2022) |

| ಬೆಳೆವಿಧ | SDRF/NDRF ಮಾರ್ಗಸೂಚಿ ದರ (ಪ್ರತಿ ಹೆಕ್ಟೇರ್ ಗೆ ) | ಹೆಚ್ಚುವರಿ ದರ (ಪ್ರತಿ ಹೆಕ್ಟೇರ್ ಗೆ ) | ಪರಿಷ್ಕೃತ ದರ |
|---|---|---|---|
| ಮಳೆಯಾಶ್ರಿತ | ರೂ.6,800/- | ರೂ.6,800/- | ರೂ.13,000/- |
| ನೀರಾವರಿ | ರೂ.13,500/- | ರೂ.11,500/- | ರೂ.25,000/- |
| ಬಹುವಾರ್ಷಿಕ | ರೂ.18,000/- | ರೂ.10,00/- | ರೂ.28,000/- |

ಮೇಲಿನ ಆದೇಶದನ್ವಯ ಬೆಳೆ ನಷ್ಟ ಪರಿಹಾರ ವಿತರಿಸಲು "ಪರಿಹಾರ" ತಂತ್ರಾಂಶದಲ್ಲಿ ಈವರೆಗೆ ಒಟ್ಟು 2111 ಹೆಕ್ಟೇರ್ ರಷ್ಟು ಬೆಳೆ ನಷ್ಟ ಮಾಹಿತಿ ಇಂಡೀಕರಿಸಲಾಗಿದೆ.

| ಪ್ರಶ್ನೆ | ಉತ್ತರ |
|---|---|
| (ಇ) ಪರಿಹಾರ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; <br> (ಈ) ಬಂದಿದ್ದಲ್ಲಿ, ಪರಿಹಾರ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? | ಪರಿಹಾರ ವಿತರಣೆಯಲ್ಲಿ ವಿಳಂಬವಾಗಿರುವುದಿಲ್ಲ. 2022ನೇ ಸಾಲಿನ ಜೂನ್ ರಿಂದ ಪ್ರಸ್ತುತದವರೆಗೆ ಹಾನಿಯಾಗಿರುವ ಕೃಷಿ ತೋಟಗಾರಿಕೆ ಹಾಗೂ ಕಾಫಿ ಬೆಳೆಗಳಿಗೆ ಸಂಬಂಧಿಸಿದಂತೆ ಹಾನಿಯಾದ ವಿವರವನ್ನು ಪರಿಹಾರ ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದ್ದು, ಪರಿಹಾರದ ಹಣವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮ ಮಾಡಲಾಗುತ್ತಿದೆ. |

*ಕಂಇ 363ಟಿಎನ್‌ಆರ್ 2022*

**(ಆರ್.ಅಶೋಕ)**
ಕಂದಾಯಸಚಿವರು